**<u>ಸಾಕ್ಷಿಯನ್ನು ದಿನಾಂಕಃ 23.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿಗಳ ಪರ ಶ್ರೀ ಸಿ.ಎಲ್,ಬಿ, ವಕೀಲರಿಂದಃ</u>**

ಸರ್ವೆ ನಂ. 391 ರಲ್ಲಿ ಒಟ್ಟು 1 ಎಕರೆ 17 ಗುಂಟೆ ಇರುತ್ತದೆ. ಸರ್ವೆ ನಂ. 391 ರಲ್ಲಿ 2 ಎಕರೆ 6 ಗುಂಟೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಖರೀದಿಸುವ ಪೂರ್ವದಲ್ಲಿಯೇ 1 ನೇ ಪ್ರತಿವಾದಿ ಸರ್ವೆ ನಂ. 391 ರಲ್ಲಿರುವ 1 ಎಕರೆ 32 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಜಮೀನು ಇರುತ್ತದೆ. ನಾನು ಖರೀದಿಸುವ ಪೂರ್ವದಲ್ಲಿಯೇ 1 ನೇ ಪ್ರತಿವಾದಿ ಅವರ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಜಮೀನಿಗಿಂತ ನಮ್ಮ ಜಮೀನು 2 ಅಡಿ ಎತ್ತರ ಪ್ರದೇಶದಲ್ಲಿರುತ್ತದೆ ಎಂದರೆ 4 ಅಡಿ ಎತ್ತರ ಪ್ರದೇಶದಲ್ಲಿರುತ್ತದೆ. ನಮ್ಮ ಮತ್ತು 1 ನೇ ಪ್ರತಿವಾದಿಯ ಜಮೀನಿನ ನಡುವ ತೆವರು ಇರಲಿಲ್ಲ, ಆದರೆ ಓಣಿ ಇತ್ತು. ನಾನು ಜಮೀನನ್ನು ಖರೀದಿಸಿದ ನಂತರ 4 ದಿಕ್ಕುಗಳಲ್ಲಿ ತಂತಿಬೇಲಿ ಹಾಕಿಸಿರುತ್ತೇನೆ ಎಂದರೆ 3 ಕಡೆ ಹಾಕಿಸಿರುತ್ತೇನೆ. ನಾನು 4 ದಿಕ್ಕಿನಲ್ಲಿಯೂ ತಂತಿಬೇಲಿ ಹಾಕಿಸಿದ್ದರೂ ಕೂಡ 3 ಕಡೆ ಹಾಕಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಸ್ವಲ್ಪ ದಿವಸಗಳ ಮುಂಚೆ ಪ್ರತಿವಾದಿಗಳ ಜಮೀನಿನ ಕಡೆಯಿರುವ ತಂತಿಬೇಲಿಯನ್ನು ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಜಮೀನನ್ನು ಖರೀದಿಸಿದ ನಂತರ ಜಮೀನನ್ನು ಅಳತೆ ಮಾಡಿಸಿ, ಕಲ್ಲು ನೆಟ್ಟಿದ್ದು, ಪ್ರತಿವಾದಿಗಳು ಕಲ್ಲನ್ನು ಕಿತ್ತುಹಾಕಿರುತ್ತಾರೆ. ನಾನು ಅಳತೆ ಮಾಡಿಸಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ನನಗೆ ನೆನಪಿಲ್ಲ. ನಾನು ಯಾವುದೇ ಜಮೀನನ್ನು ಅಳತೆ ಮಾಡಿಸಿಲ್ಲ ಎಂದರೆ ನಾನು ಅಳತೆ ಮಾಡಿಸಿ ಜಮೀನನ್ನು ಖರೀದಿಸಿರುತ್ತೇನೆ. ಪ್ರತಿವಾದಿಗಳು

ಸರ್ವೆ ಕಲ್ಲನ್ನು ಕಿತ್ತುಹಾಕಿರುವ ಬಗ್ಗೆ ತಹಶೀಲ್ದಾರ್ ರವರಿಗೆ ದೂರು ನೀಡಿಲ್ಲ, ಆದರೆ ಪೊಲೀಸ್ ಠಾಣೆಗೆ ನೀಡಿರುತ್ತೇನೆ. ನಾನು ಪೊಲೀಸ್ ಠಾಣೆಗೆ ದೂರು ನೀಡುವಾಗ ಪ್ರತಿವಾದಿಗಳು ಕಲ್ಲನ್ನು ಕಿತ್ತುಹಾಕಿರುತ್ತಾರೆಂದು ದೂರು ನೀಡಿರುತ್ತೇನೆ. ನಾನು ಹೇಳಿದಂತೆ ಯಾವುದೇ ಅಳತೆಯಾಗಿಲ್ಲ ಮತ್ತು ಅಲ್ಲಿ ಯಾವುದೇ ಕಲ್ಲನ್ನು ನೆಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಗಳ ಜಮೀನಿನ ನಡುವೆ ಒಂದು 2 ಅಡಿ ಅಗಲದ ಬದು (ತೆವರು) ಇದ್ದು, ಸದರಿ ತೆವರನ್ನು ಬಿಟ್ಟು ನನ್ನ ಜಮೀನಿಗೆ ತಂತಿಬೇಲಿ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ್ಗೆ ಎರಡು ವರ್ಷಗಳ ಹಿಂದೆ ಸದರಿ ತೆವರನ್ನು ಕೂಡ ಒತ್ತುವರಿ ಮಾಡಿಕೊಂಡು ಉಳುಮೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**